# ನೆಗಡಿಗಿಂತ ರೋಗವಿಲ್ಲ!

**ವೇದಾವತಿ ಹೆಚ್.ಎಸ್.**

ಕಲೆ: ಸಂತೋಷ್ ಸಸಿಹಿತ್ಲು

'ಮೂಗಿರುವ ತನಕ ನೆಗಡಿ ತಪ್ಪಿದ್ದಲ್ಲ, ನೆಗಡಿಗಿಂತ ರೋಗ ಇನ್ನೊಂದು ಇಲ್ಲ' ಎಂಬ ಮಾತನ್ನು ಕೇಳಿರಲೂಬಹುದು. ನೆಗಡಿ ಬಂತೆಂದರೆ ಕಿರಿಕಿರಿಯಾಗುವುದು ಸಹಜ. ನೆಗಡಿ ಯಾರನ್ನೂ ಬಿಟ್ಟಿಲ್ಲ. ಅದು ಯಾವ ಕಾರಣಕ್ಕೆ ಬರುತ್ತದೆ, ಹೇಗೆ ಬರುತ್ತದೆ ಎಂಬುದನ್ನು ನಿಖರವಾಗಿ ಹೇಳುವುದು ಕಷ್ಟ. ಮನುಷ್ಯನಿಗೆ ನೆಗಡಿ ಕಾಡಿದ ಹಾಗೆ ಹರಿಹರ ಬ್ರಹ್ಮಾದಿಗಳಿಗೂ, ರಾಮ ರಾವಣಾದಿಗಳಿಗೂ ನೆಗಡಿ ಬಂದಿತ್ತು ಎಂದು ಪುರಾಣಗಳಲ್ಲಿ ಎಲ್ಲಿಯೂ ನಾವು ಕೇಳಿಯೇ ಇಲ್ಲ! ಬಹುಶಃ ಪುರಾಣಗಳ ಕಾಲದಲ್ಲಿ

